SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು).

ಸಂಪುಟ 29 ಸಂಚಿಕೆ 159 | ಗುರುವಾರ 28—2—46 | ಬೆಲೆ ಪ್ರತಿ 3 ಪೈ

'ಹಂಗರ್ ಪೋಸ್ಟ್' ಎಂಪ್ಲಾಯಿ'

ವೈತ್ತಾಂತ ಸಂಗ್ರಹ

ಜೆರೂಸೆಲಂ ಫೆ 26— ನಿನ್ನೇ ರಾತ್ರಿ ಪ್ಯಾಲಿಸ್ಟೈನಸಲ್ಲಿ ಯಹೂದಿ ದಂಗೆಕೋರರು 14 ಆರ್. ಎ. ಎಫ್ ವಿಮಾನಗಳನ್ನೂ, 3 ವಿಮಾನ ನಿಲ್ದಾಣಗಳನ್ನೂ ನಾಶಮಾಡಿದರು.

ಕೈರೊ ಫೆ 26— ಹಲವು ಸಹಸ್ರ ಮಂದಿ ವಿದ್ಯಾರ್ಥಿಗಳು ಸಭೆ ನಡೆಸಿ, ಬ್ರಿಸಾಮ್ರಾಜ್ಯಶಾಹಿಯ ಮೇಲೆ ಸಂಗ್ರಾಮ ಘೋಷಿಸಬೇಕೆಂದೂ, ಬ್ರಿಟಿಷ್ ವಸ್ತುಗಳಿಗೆ, ಇಂಗ್ಲೀಷು ಭಾಷೆಗೆ ಬಹಿಷ್ಕಾರ ಹಾಕಬೇಕೆಂದೂ ಠರಾವು ಮಾಡಿದರು.

ಬೆಂಗಳೂರು ಫೆ 26— ಇನ್ನು ಮೇಲೆ ಸಂಸ್ಥಾನದಿಂದ ಹೊರಕ್ಕೆ ಸರ್ಕಾರದ ಅಪ್ಪಣೆಯಿಲ್ಲದೆ ಯಾವ ಕಾಳನ್ನೂ ಕಳಿಸಕೂಡದೆಂದು ಆಜ್ಞೆಯಾಗಿದೆ.

ಮೈಸೂರು ಸರಕಾರದ ಪಬ್ಲಿಸಿಟಿ ಆಫೀಸಂವರು ಒಂದು ಪೈಸೆ ನೋಟನ್ನು ಹೊರಡಿಸಿ, ಮೈ || ಕಾಂ || ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ ವಿಷಯಗಳಲ್ಲಿ ಕೆಲವು ವೈತ್ಯಾಸಗಳಿರುವುದನ್ನು ವಿವರಿಸಿ ಸರ್ಕಾರದವರು ಚಿತ್ರದುರ್ಗ ಡಿ || ಆಹಾರ ಪರಿಸ್ಥಿತಿಯನ್ನು ವಿಚಕ್ಷಣೆಯಿಂದ ನೋಡುತ್ತಿರುವರೆಂದು ತೀಳಿಸುವರು.

ಸ್ಪೇನಿನಲ್ಲಿ 11 ಮಂದಿ ರಿಪಬ್ಲಿಕನ್ನರಿಗೆ ಮರಣ ದಂಡನೆ ವಿಧಿಸಿದ್ದರಿಂದ, ಫ್ರಾನ್ಸಿಸವರು ಸ್ಪೇಕ್ ಕಡೆಯ ತಮ್ಮ ಗಡಿಯನ್ನು ಬಂದು ಮಾಡಿದ್ದಾರೆ.

ಸ್ಯೂಯಾರ್ಕ್ ಫೆ 25— ರಷ್ಯಾವು ಟರ್ಕೀ ಮೇಲೆ ಆಕ್ರಮಣ ಕಾರ್ಯವನ್ನು ಏಪ್ರಿಲ್ ತಿಂಗಳಲ್ಲಿ ನಡೆಸುವುದೆಂದು ಡ್ರು ಪಿಯರ್ಸನ್‌ರು ಆಕಾಶವಾಣಿ ಭಾಷಣದಲ್ಲಿ ಭವಿಷ್ಯ ನುಡಿದಿರುವರು.

'ಹಂಗರ್ ಪೋಸ್ಟ್‌ಮ್ಯಾಸ್ಟರ್' ಎಂಪ್ಲಾಯಿ' ಎಂಬುದಾಗಿ ಭಾರತದ ಎಲ್ಲಾ ಅಂಚೆ ಮತ್ತು ತಂತಿ ನೌಕರುಗಳು ಬ್ಯಾಡ್ಜ್‌ಗಳನ್ನು ಹಾಕಿಕೊಂಡಿರುವರು. ಬರುವ ತಿಂಗಳು ತಾರೀಖು 11 ರಿಂದ ಆರಂಭವಾಗಲಿರುವ ಅಂಚೆ ಮತ್ತು ತಂತಿ ನೌಕರರುಗಳ ಮಹಾ ಮುಷ್ಕರಕ್ಕೆ ಈ ಗುರುತೇ ಸೂಚನೆಯೆಂದು ತಿಳಿಯಬಂದಿದೆ. ಮೈಸೂರಿನಲ್ಲಿಯೂ ಅಂಚೆ ವತ್ತು ತಂತಿ ನೌಕರರುಗಳು ಈ ಗುರುತನ್ನು ತಮ್ಮ ಅಂಗಿಯ ಮೇಲೆ ಧರಿಸಿರುವರು.

ಕಲ್ಲಿಕೋಟೆ, ಫೆ 26 — ಕೊಬ್ಬರಿ ಎಣ್ಣೆ, ಕೊಬ್ಬರಿ ಮತ್ತು ತೆಂಗಿನ ಕಾಯಿ ಬೆಲೆ ಸ್ವಲ್ಪ ಇಳಿದಿದೆ.

ಬೊಂಬಾಯಿ, ಫೆ 27 — ನಾವಿಕ ಮುಷ್ಕರಕಾರರ ಪೈಕಿ ಈ ಮಂದಿಯನ್ನು ಯಾವುದೋ ಗೊತ್ತಿಲ್ಲದ ಸ್ಥಳಕ್ಕೆ ಒಯ್ಯಲಾಗಿದೆ.

ಮದರಾಸು ಫೆ 27— ನಗರವು ಶಾಂತಿಯಿಂದಿದ್ದು ಕಾರ್ಮಿಕಲಾಪಗಳು ಎಂದಿನಂತೆ ನಡೆಯುತ್ತಿದೆ.

ನವದೆಹಲಿ, ಫೆ 26 — ಆಲ್ ಇಂಡಿಯಾ ಪೋಸ್ಟ್‌ಮೇಕ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಯೂನಿಯನ್‌ನಲ್ಲಿ ಒಂದು ಲಕ್ಷ ಮಂದಿ ಸದಸ್ಯರಿರುವರೆಂದೂ ಮಾರ್ಚ್ 5 ಕೊಳದೆ ಇವರ ಕೇಳಿಕೆಗಳು ವ್ಯವಸ್ಥೆಯಾಗದಿದ್ದಲ್ಲಿ ಮಾರ್ಚ್ 11 ರಿಂದ ಇವರು ಮುಷ್ಕರ ಹೂಡಿಯುವರೆಂದು ಜ || ಸೆಕ್ರಟರಿ ಯು ಪ ಡ ಹೇಳಿಕೆಯಾಗಿದೆ.

ಮಧ್ಯ ಭಾರತದ ಒಂದು ಕ್ಯಾಂಪಿನಿಂದ ಜಪಾನೀ ಖೈದಿಗಳು ಗಲಭೆ ಮಾಡಿ ತಪ್ಪಿಸಿಕೊಂಡುಹೋಗಲು ಪ್ರಯತ್ನಿಸಿದರೆಂದು ಹೇಳಲಾಗಿದೆ.

ಮೈಸೂರು

ನಿನ್ನೆಯ ದಿವಸ ಮಧ್ಯಾಹ್ನ ಮೈಸೂರು ಜಿಲ್ಲಾಸಭೆಯ ಉಪಾಧ್ಯಕ್ಷರಾದ ಶ್ರೀ ಟಿ. ಸಿ. ಹೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಜಿಲ್ಲಾಸಭೆಯ ಅಧಿವೇಶನದಲ್ಲಿ ಪ್ರಭುಗಳಿಗೆ ಜಿ. ಸಿ ಬಿ. ಪ್ರಶಸ್ತಿ ದೊರೆತುದಕ್ಕಾಗಿಯೂ ಸಂಸ್ಥಾನದಲ್ಲಿ 35 ಲಕ್ಷ ರೂ ಗಳ ಶಾಶ್ವತ ದಾಯವನ್ನು ಪೂರೈಮಾಡಿದುದಕ್ಕಾಗಿಯೂ ಅಭಿನಂದಿಸುವ ನಿರ್ಣಯಗಳಾದವು. ಜಿಲ್ಲಾಸಭೆಯು ಒಲೆದ ಪತ್ರಕ್ಕೆ ಸರ್ಕಾರದ ಆಹಾರಾಧಿಕಾರಿಗಳು ಬೇಜವಾಬ್ದಾರಿಯುತವಾಗಿ ಉತ್ತರಕೊಟ್ಟಿರುವುರೆಂದು ಶ್ರೀ ಚನ್ನಬಸವಯ್ಯನವರು ಖಂಡಿಸುವ ನಿರ್ಣಯವೊಂದನ್ನು ಸಭೆಯು ಮುಂದೆ ಇಟ್ಟರು. ಇದರ ಪರವಾಗಿ 11 ಓಟುಗಳು ಬಂದವು. ವಿರೋಧ ಓಟುಗಳೇನೂ ಬರಲಿಲ್ಲ.

ಹಿಂದೀ ರಾಷ್ಟ್ರಭಾಷೆಯಾಗಬೇಕೆಂದು ನಿನ್ನೆಯ ದಿವಸ ಶ್ರೀ ರಾಮಚಂದ್ರ ರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆದ ಹಿಂದೀ ಪ್ರಮೋಷನ್ ಪತ್ರಿಕಾ ವಿತರಣೋತ್ಸವ ಸಂಧರ್ಭದಲ್ಲಿ ಶ್ರೀಮತಿ ಲೋಕಸುಂದರಿ ರಾಮಸರು ಭಾಷಣ ಮಾಡಿದರ.

ನಿನ್ನೆಯ ದಿವಸ ಸಂಜೆ ಸುಬ್ಬರಾಯ್ಯನ ಕರೆಯುಲ್ಲಿ ಚಿನ್ನದ ಗಣಿ ಕೂಲಿಕಾರರ ವಿನಾಚರಣೆಯನ್ನೇರ್ಪಡಿಸಲಾಗಿತ್ತು.

ಯಾಕೂಬ್ ಎಂಬ ಜಟಕಾ ಗಾಡಿಯವನು ಹೆಚ್ಚು ಬಾಡಿಗೆ ಕೇಳಿದನೆಂದು ರೂ. 5 ಜುಲ್ಮಾನೆ ವಿಧಿಸಲಾಯಿತು.

ಡಾ || ಟಿ ಸಿ ಎಂ ರಾಯನ್ನರು ನಿನ್ನೆಯ ದಿವಸ ಬೆಳಿಗ್ಗೆ ಶ್ರೀಮನ್ಮಹಾರಾಜರ ಭಾವಚಿತ್ರ ಅನಾವರಣೋತ್ಸವವನ್ನು ಶ್ರೀ ವಿಠಲರಾಯರ ಶ್ರೀರಾಮ ಮಂದಿರದಲ್ಲಿ ತಮ್ಮ ಅಮೃತ ಹಸ್ತದಿಂದ ನೆರವೇರಿಸಿದರು.

ಕರ್ನಾಟಕ ಪ್ರಾಂತೀಯ ಕಾಂಗ್ರೇಸ್ ಪ್ರತಿನಿಧಿಗಳ ಚುನಾವಣೆಗೆ ಮೈಸೂರು ವರವಾಗಿ ಶ್ರೀ ಕೆ. ಸುಬ್ಬಣ್ಣನವರು ಸ್ಪರ್ಧಿಸುವುದಾಗಿ ತಿಳಿಯಬಂದಿದೆ.

ನಾಯಿಯು ರಾಜ್ಯಭಾರ

ಅಬ್ಸೀನಿಯಾ ದೇಶಕ್ಕೆ ಮೂರು ಸಾವಿರ ವರ್ಷಗಳ ಹಿಂದೆ ನಾಯಿಯೇ ರಾಜನಾಗಿರುತ್ತಿತ್ತಂತೆ. ಪರಿಪಾಲನೆಗೆ ಸಂಬಂಧಪಟ್ಟ ಕಾಗದಿಗಳನ್ನು ಆ ಶುನಕ ರಾಜರಿಗೆ ಓದಿ ಹೇಳಿದಾಗ ಅದು ಬಾಲವನ್ನು ಅಲ್ಲಾಡಿಸಿದಲ್ಲಿ ಮಂಜೂರು ಆಯಿತೆಂದೂ ' ಬೌ ' ಎಂದು ಬೊಗಳಿದರೆ ಮಂಜೂರು ಆಗಲಿಲ್ಲವೆಂದೂ ನಿರ್ಣಯಿಸುತ್ತಿದ್ದರಂತೆ;

ಯುದ್ಧಾನಂತರ

ಪ್ರಪಂಚವು ಮತ್ತೊಂದು ಮಹಾ ಸಂಗ್ರಾಮದ ಕಡೆ ಪ್ರಯಾಣ ಮಾಡುತ್ತಿದೆ. ಈ ಪ್ರಯಾಣದ ವೇಗ ನಮ್ಮ ನಮ್ಮ ಕಣ್ಣಿಗೆ ಕಾಣಬರದಂತಾದ್ದು; ಊಹೆಗೆ ವಿಚಾರದ್ದು; ವಾಯುವೇಗ ಮನೋವೇಗಗಳಾಗಿವೆ! ಆಟಂ ಬಾಂಬು ರಹಸ್ಯವನ್ನು ವಿಶ್ವರಾಜ್ಯಗಳವರು ತಮ್ಮಲ್ಲಿಯೇ ಇಟ್ಟುಕೊಂಡಿರಲು ಯತ್ನಿಸಿದರೂ, ಯಾರೋ ಒಬ್ಬನು (ರಷ್ಯರೇ ಇರಬಹುದು) ತಮ್ಮ ಗೂಢಚಾರರ ಮುಖಾಂತರ ವಿಷಯವನ್ನು ಅರಿತುಕೊಂಡಿರುವರಂತೆ. ಈ ವಿಷಯದಲ್ಲಿ ತೀವ್ರವಾಗಿ ವಿಚಾರಣೆಗಳು ನಡೆಯುತ್ತಿವೆ.

ಇದು ಹೀಗಿರುವಾಗ ಪ್ರಪಂಚವನ್ನೆಲ್ಲಾ ಒಂದು ಮಹಾ ಕ್ಷಾಮವು ಕಾಡುಕೊಂಡು ಕೂತಿದೆ. 100 ಕೋಟಿ ಮಂದಿಗೆ ಈ ವರ್ಷ ಆಹಾರದ ಕೊರತೆ ಏರ್ಪಟ್ಟಿರುವದೆಂದೂ, ಅದಕ್ಕಾಗಿ ಕೊನೆಯ ಪಕ್ಷ 50 ಲಕ್ಷ ಟನ್‌ಗಳ ಅಕ್ಕಿಯು ಅವಶ್ಯಕವೆಂದೂ ಪ್ರಪಂಚ ಭದ್ರತಾ ಸಂಘದವರು ಅಂದಾಜು ಹಾಕಿರುವರು. ನಮ್ಮ ಭಾರತ ದೇಶದಲ್ಲಿಯೇ ಈ ವರ್ಷ 70 ಲಕ್ಷ ಟನ್‌ಗಳ ಆಹಾರ ಪದಾರ್ಥಗಳ ಕೊರತೆ ಇರುವುದಂತೆ.

ಇಂಡೋನೇಷಿಯಾ ಹೋರಾಟವು ಸ್ವಲ್ಪ ತಗ್ಗಿದೆ. ಡಚ್ಚರು ಕೆಲವು ಅನುಕೂಲಗಳನ್ನು ಕಲ್ಪಿಸುವದಾಗಿ ಹೇಳುತ್ತಿರುವರು. ತೀವ್ರವಾದಿಗಳು ಸಂಪೂರ್ಣ ಸ್ವರಾಜ್ಯವೇ ಬೇಕೆನ್ನುತ್ತಿರುವರು. ಅದಕ್ಕಾಗಿ ಆಂದೋಳನ ಮಾಡುತ್ತಿರುವರು. ಡಚ್ಚರಿಗೆ ತಮ್ಮ ಹಿಡಿತವನ್ನು ಬಿಡಲು ಇಷ್ಟವಿಲ್ಲ.

ಪಾಕ್ಷ್ಯಾವು ರಷ್ಯಾದೊಂದಿಗೆ ರಾಯಭಾರ ನಡೆಸುತ್ತಿದೆ. ಫಲವೇನಾಗುವುದೋ ಮುಂದೆ ನೋಡಬೇಕು.

ಚೀನಾಕ್ಕೆ ಸೇರಿದ ಮಂಚೂರಿಯಾದಲ್ಲಿ ಪುನಃ ಗಲಭೆಗಳು ಆಗುತ್ತಿವೆ. ಚೀನಾದಲ್ಲಿ ಅಮೇರಿಕನ್ನರು ಇರುವವರೆಗೂ, ರಷ್ಯನ್ನರು ಮಂಚೂರಿಯಾವನ್ನು ಬಿಟ್ಟು ಹೋಗಲು ಒಪ್ಪಲಾರರು. ಮುಂದೆ ಏನಾಗುವುದೋ ನೋಡಬೇಕು!

Specific for Asthama

The world renowned remedy for Asthama 'Lachhmana Buti' cures Asthama radically by one single dose taken on full-moon (17-3-46)

Correspondence in English please.

Sebak Sree Janki Sewashram. Chitrakot (U.P.)

ಅಹಿಂಸೆಯ ಪವಾಡ

ನಮ್ಮ ಜಿಲ್ಲೆಯಲ್ಲಿ ಕೆಲವು ದಿನಗಳಿಂದ ಸಂಚರಿಸುತ್ತಿರುವ ಆಚಾರ್ಯ ಶ್ರೀ 108 ಎಂಬೂಸಾಗರದ ದಿಗಂಬರ ಜೈನ ಮುನಿ ಸಂಘದವರು ಜೈನ ಕ್ಷೇತ್ರಗಳನ್ನು ಧರ್ಮ ಪ್ರಭಾವನೆಯ ಉದ್ದಿಶ್ಯ ಪ್ರವಾಸ ಮಾಡುತ್ತಿರುವ ವೇಳೆಯಲ್ಲಿ ಉಪ್ಪಿನಂಗಡಿಯ ಸಮೀಪ ಹೆಳಜ್ಜ ಎಂಬ ಸ್ಥಳದಲ್ಲಿ ಒಸಪ್ಪಕೋಡಿ ಎಂಬಲ್ಲಿಯ ಒಬ್ಬ ಮುಸಲಿಮ ವ್ಯಕ್ತಿಯು ಮುನಿಗಳನ್ನೂ ಅವರೊಡನಿದ್ದ ಇತರ ಪರಿವಾರದವರನ್ನೂ ಅತ್ಯಂತ ಹೀನ ರೀತಿಯಲ್ಲಿ ಮಾತನಾಡಿಸಿದ. ಆಗ ಪರಿವಾರದವರು ಆ ವ್ಯಕ್ತಿಯನ್ನು ಪ್ರತಿಭಟಿಸುವ ಆಲೋಚನೆಮಾಡಲು ಮುನಿಗಳು ಅವರನ್ನು ಸಾಧ್ಯವಿಸಿ ನಿಲ್ಲಿಸಿದರು. ಆ ವ್ಯಕ್ತಿಯ ಅವಹೇಳನವು ಮುಖ್ಯವಾಗಿ ಮುನಿಗಳ ದಿಗಂಬರತ್ವದ ಕುರಿತಾಗಿತ್ತು. ಆದರೆ ಅಂದೇ ಸಾಯಂಕಾಲದಿಂದ ಆ ವ್ಯಕ್ತಿಯು ಜ್ವರದಿಂದ ಬಾಧೆಗೊಡಿದ ಒಂದು ವಿಚಿತ್ರರೀತಿಯ ಕಾಯಿಲೆಯಿಂದ ನರಳತೊಡಗಿ ಕೇವಲ ಆರೇಳು ದಿನಗಳಲ್ಲಿ ಮೃತಪಟ್ಟನು. ಆದಾದ ಮೇಲೆ ಪುನಃ ಅವನ ತಮ್ಮನಿಗೂ ಅದೇ ಖಾಯಿಲೆಯು ಶುರುವಾಗಿದೆಯೆಂದು ಸುದ್ದಿ. (ಪುತ್ತೂರು ವಾರ್ತೆ)

ನ. ಭಾ.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು

At Opera —
3 ನೇ ವಾರ
ಪರಂಜ್ಯೋತಿ
ಎ. ಎ. ಚೆಲ್ಲಪ್ಪ ಸಿ.ಪಿ. ರಾಜಲಕ್ಷ್ಮಿ
ಬಾಲ ಸುಬ್ರಹ್ಮಣ್ಯಂ ಜಯಗೌರಿ
ಕೃಷ್ಣ ಮಧುರಂ ಪಾತ್ರಧಾರಿಗಳು
ಮುಂದಿನ ವಿನೋದ
ಸುರೇಂದ್ರ, ಮೋಹತಾಜ್
ಪಾತ್ರವಹಿಸಿರುವ
ವಿಶ್ವಾಸ್

At Ranjit
From 1-3-46
Vijay Laxmi
ಶೋಭನ ಸಮರ್ಥ
ಮೋತಿಲಾಲ್
ಮುಂತಾದವರು ಪಾತ್ರವಹಿಸಿರುವ
ವಿಜಯಲಕ್ಷ್ಮಿ

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಜಾತಿಕ ಔಷಧೆದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧಕ —
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.



ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಅಲ್ಪ ವ್ಯಯದ ಕಾಯಕಲ್ಪ
ಶಕ್ತಿಸುಧಾ
ರಕ್ತವೃದ್ಧಿಗೆ — ಧಾತುಪುಷ್ಟಿಗೆ
ಸಂಜೀವನ
ಬೆಲೆ ಡಬ್ಬಿಗೆ ರೂ. ೧.೮-೦
ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು